**ಪರಿಚಯ:**
**ಜಾದೂಗಾರ ಜ್ಯೂನಿಯರ್ ಶಂಕರ್/ ತೇಜಸ್ವಿ**
**ಜನನ** - **29 ಜುಲೈ 1978 ಪುತ್ತೂರು ದ.ಕ. ಜಿಲ್ಲೆ ಕರ್ನಾಟಕ**
**ಊರು:** **ಉಡುಪಿ**

**ವಿದ್ಯಾಭ್ಯಾಸ -**
ಪ್ರಾಥಮಿಕ – ಕೇಂಬ್ರಿಜ್ ಫೌಂಡೇಶನ್ ಸ್ಕೂಲ್, ರಜೌರಿ ಗಾರ್ಡನ್, ನವದೆಹಲಿ
ಬಿ.ಬಿ.ಯಂ. ಪೂರ್ಣಪ್ರಜ್ಞ ಕಾಲೇಜು, ಉಡುಪಿ ಯಂ. ಸಿ. ಎ (IGNOU)
ತಂದೆ- ತಾಯಿ ಪ್ರೊ. ಶಂಕರ್ - ಲಕ್ಷ್ಮಿ ಶಂಕರ್
ಪತ್ನಿ-ಮಗ ಮೈಥಿಲಿ-ವರ್ಚಸ್ವಿ
**ಉದ್ಯೋಗ** Manager(Admn) & Software Developer
Skanda Electricals, Mangalore

**ಇತರ ಹವ್ಯಾಸಗಳು:**
**ಜಾದೂ ಸಲಕರಣೆಗಳ ವಿನ್ಯಾಸ ಮತ್ತು ತಯಾರಿ**
**ವೆಬ್ ಡಿಸೈನಿಂಗ್**
**ವಿಟ್ಲದ 'ಸಮನ್ವಯ' ಸಂಗೀತ ತಂಡದ ಕಲಾವಿದ**
**ಕಲಾಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವಿಕೆ**
**ಜಾದೂ ಶಿಬಿರಗಳನ್ನು ನಡೆಸಿ ವಿದ್ಯಾರ್ಥಿಗಳಿಗೆ ತರಬೇತಿ, ಜಾದೂ ಬಗ್ಗೆ ಉಪನ್ಯಾಸ**
**ನಾಟಕ ರಂಗಮಂಚದಲ್ಲಿ ಬೆಳಕಿನ ವಿನ್ಯಾಸ**
**ದೃಶ್ಯ-ಶ್ರಾವ್ಯಗಳ ಎಡಿಟಿಂಗ್(ಆಡಿಯೊ-ವೀಡಿಯೋ ಎಡಿಟಿಂಗ್)**
**ಲಘು ಸಂಗೀತ ಕಾರ್ಯಕ್ರಮದಲ್ಲಿ ಹಿಮ್ಮೇಳದಲ್ಲಿ ಭಾಗವಹಿಸುವುದು**

**ಸಾಧನೆಗಳು:**
ಬಾಲ್ಯದಲ್ಲೇ ಜಾದೂ ಬಗ್ಗೆ ಆಸಕ್ತಿ. ತಂದೆಯ ನೀಡುತ್ತಿದ್ದ ಜಾದೂ ಕಾರ್ಯಕ್ರಮಗಳಿಂದ ಪ್ರೇರಣೆ
3 ವರ್ಷದಲ್ಲೇ ಪ್ರಥಮ ಪ್ರದರ್ಶನವನ್ನು ನೀಡಿದ ಖ್ಯಾತಿ. (ನವಂಬರ್ 14, 1981, ಮಣಿಪಾಲ)

1982ರಲ್ಲಿ 5500ಕ್ಕೂ ಮಿಕ್ಕಿ ಕಾರ್ಯಕ್ರಮಗಳನ್ನು ಭಾರತದಲ್ಲಿ ಮಾತ್ರವಲ್ಲದೇ ಅರಬ್ ರಾಷ್ಟ್ರಗಳಲ್ಲಿ, ಅಮೇರಿಕಾ, ಲಂಡನ್, ಸ್ವಿಜರ್‌ಲೇಂಡ್, ಹಾಲೇಂಡ್, ಜರ್ಮನಿ, ಶ್ರೀಲಂಕಾ, ಕುವೈಟ್, ಮಾರಿಶಸ್, ನೀಡಿದ ಹೆಮ್ಮೆಯ ಮೋಡಿಗಾರ.

4 ವರ್ಷದ ಬಾಲಕನಾಗಿದ್ದಾಗ ನ್ಯೂಯಾರ್ಕ್‌ನಲ್ಲಿ (1982 ಅಗೋಸ್ತು 15) ಭಾರತದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ 50,000ಕ್ಕೂ ಮಿಕ್ಕಿದ ಅಪಾರ ಜನಸ್ತೋಮದೆದುರು ಜಾದೂ ಪ್ರದರ್ಶನ. ಪ್ರಪಂಚದ ಅತೀ ಕಿರಿಯ ವಯಸ್ಸಿನ ಜಾದೂಗಾರ ಎಂಬ ಹೆಗ್ಗಳಿಕೆ.

ಜಗತ್ಪ್ರಸಿದ್ಧ ಜಾದೂಗಾರರಾದ ಡಗ್ ಹೆನ್ನಿಂಗ್, ಡೇವಿಡ್ ಕಾಪರ್ ಫೀಲ್ಡ್, ಮಾರ್ಕ್ ವಿಲ್ಸನ್, ಆಲಿ ಬಾಂಗೋ ಮುಂತಾದವರಿಂದ ಪ್ರಶಂಸೆ

1999 ಜೂನ್ 12ರಿಂದ 28ರವರೆಗೆ ಜರ್ಮನಿಯಲ್ಲಿ ಹಲವಾರು ಕಡೆ 25ಕ್ಕೂ ಅಧಿಕ ಪ್ರದರ್ಶನಗಳು.

ಶ್ರೀ ರಾಜೀವ್ ಗಾಂಧಿಯವರು ಭಾರತದ ಪ್ರಧಾನಿಯಾಗಿದ್ದಾಗ ಅವರಿಗಾಗಿ ವಿಶೇಷ ಕಾರ್ಯಕ್ರಮ

ಭಾರತದ ರಾಷ್ಟ್ರಪತಿಗಳಾಗಿದ್ದ ದಿ. ಜೈಲ್ ಸಿಂಗ್, ಶ್ರೀ ಶಂಕರ್ ದಯಾಳ್ ಶರ್ಮಾ ಅವರಿಗಾಗಿ ರಾಷ್ಟ್ರಪತಿಭವನದಲ್ಲಿ ವಿಶೇಷ ಪ್ರದರ್ಶನ

ಉತ್ತರ ಭಾರತ ಸಾಂಸ್ಕೃತಿಕ ಸಂಘ ಪ್ರಾಯೋಜಕತ್ವದಲ್ಲಿ ಉತ್ತರ ಭಾರತದ ಪಂಜಾಬ್, ಹರಿಯಾಣ, ಜಮ್ಮು, ಹಿಮಾಚಲ, ರಾಜಸ್ಥಾನ ಮುಂತಾದ ರಾಜ್ಯಗಳಲ್ಲಿ ಅವಿರತ ಪ್ರದರ್ಶನಗಳು.

ಜಮ್ಮುವಿನ ಭಾರತ-ಪಾಕಿಸ್ಥಾನ ಗಡಿ ಪ್ರದೇಶದಲ್ಲಿ ಸೇನಾಧಿಕಾರಿಗಳಿಗಾಗಿ ಪ್ರದರ್ಶನ

2007ರಲ್ಲಿ ಬೆಂಗಳೂರಿನಲ್ಲಿ ಪ್ರಜಾವಾಣಿ ಪ್ರಾಯೋಜಕತ್ವದಲ್ಲಿ 15000 ಕ್ಕೂ ಮಿಕ್ಕಿ ಶಾಲಾ ಮಕ್ಕಳಿಗೆ ಉಚಿತ ಕಾರ್ಯಕ್ರಮ

2011ರ ಮಾರ್ಚ್ ತಿಂಗಳಲ್ಲಿ ಸಿಕ್ಕಿಮ್‌ನ ಹಿಮಚ್ಛಾದಿತ ಪರ್ವತಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸೇನಾ ಯೋಧರಿಗಾಗಿ ಕಾರ್ಯಕ್ರಮ.
"How is That.." ಎಂಬ ಪುಸ್ತಕ ರಚನೆ

ಉದ್ದೇಶ ಪೂರಿತ ಜಾದೂ:

**ಕಾರ್ಗಿಲ್ ಜಾದೂ:**

- ಕಾರ್ಗಿಲ್ ಯುದ್ಧದ ತೀವ್ರತೆಯನ್ನು ಪ್ರತಿಬಿಂಬಿಸುವ ಈ ಪರಿಣಾಮಕಾರೀ ಜಾದೂ ಪ್ರದರ್ಶನದಿಂದ ಒಟ್ಟುಗೂಡಿಸಿದ ಹಣವನ್ನು ಕಾರ್ಗಿಲ್ ನಿಧಿಗೆ ಸಮರ್ಪಣೆ

ಈ ಜಾದೂ ಕಾರ್ಯಕ್ರಮವು ಬೆಂಗಳೂರಿನ ವಿಧಾನಸೌಧದಲ್ಲೂ ಪ್ರದರ್ಶನಗೊಂಡಿದೆ.

- ದೇಶದ ಅಖಂಡತೆ, ಸಾರ್ವಭೌಮತೆ, ಸಹಬಾತೃತ್ವವನ್ನು ಸಾರುವ 'ವಂದೇ ಮಾತರಂ',
- ಅಮಾಯಕ ಜನರನ್ನು ಮೋಸಗೊಳಿಸುವ ಹಣಕಾಸು ಸಂಸ್ಥೆಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು
- ಕರ್ನಾಟಕ ಪೋಲೀಸ್ ಪ್ರಾಯೋಜಕತ್ವದ ಅಪರಾಧ ತಡೆ ಸಪ್ತಾಹದಲ್ಲಿ ಕಾರ್ಯಕ್ರಮಗಳು
- ದೇಶದಾದ್ಯಂತ ಲಯನ್ಸ್, ರೋಟರಿ, ಜೇಸೀ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಶಾಲಾ ಕಾಲೇಜು ಸಂಘಗಳು-ಇವೇ ಮೊದಲಾದ ಸಂಘಗಳ ಸಮಾಜ ಸೇವಾ ಕಾರ್ಯಕ್ರಮಗಳ ಸಹಾಯಾರ್ಥ ಜಾದೂ ಪ್ರದರ್ಶನಗಳು
- ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಶೀಘ್ರ ಕಲಿಕೆಗೆ ಸಹಕಾರಿಯಾಗುವ, ಪೂರ್ಣ ಮನೋರಂಜನೆ ನೀಡುವ ಜಾದೂ ಪ್ರದರ್ಶನಗಳು
- ಆಸ್ಪತ್ರೆ, ವೃದ್ಧಾಶ್ರಮಗಳು, ಅನಾಥಾಶ್ರಮಗಳು ಮುಂತಾದೆಡೆ ಉಚಿತ ಮನೋರಂಜನಾ ಕಾರ್ಯಕ್ರಮಗಳು

**ಆಧ್ಯಾತ್ಮಿಕ ಜಾದೂ**

2003ನೇ ಇಸವಿಯಿಂದ ದೇಶದೆಲ್ಲೆಡೆ ಜನರಲ್ಲಿ ಆಧ್ಯಾತ್ಮದ ಬಗ್ಗೆ ಒಲವನ್ನು ಮೂಡಿಸುವ ಸಲುವಾಗಿ ಜಾಗೃತಿಗಾಗಿ ಜಾದೂ ಎಂಬ ಹೆಸರಿನಲ್ಲಿ ಆಧ್ಯಾತ್ಮಿಕ ಜಾದೂ ಪ್ರದರ್ಶನ
ಎಪ್ರಿಲ್ 2007 ರಿಂದ ಮೇ 2008 ಮೇ ತಿಂಗಳ ಅವಧಿಯಲ್ಲಿ ಕರ್ನಾಟಕದಾದ್ಯಂತ ಬ್ರಹ್ಮಕುಮಾರೀ ಈಶ್ವರೀಯ ವಿಶ್ವವಿದ್ಯಾಕಯ ಪ್ರಾಯೋಜಕತ್ವದಲ್ಲಿ ಅವಿರತ ಆಧ್ಯಾತ್ಮಿಕ ಜಾದೂ ಕಾರ್ಯಕ್ರಮಗಳು
ತಿಹಾರ್ ಜೈಲ್ ನ ಕೈದಿಗಳಿಗಾಗಿ ಈ ಕಾರ್ಯಕ್ರಮದ ಪ್ರದರ್ಶನ
ಸ್ವರ್ಣಿಮ ಕರ್ನಾಟಕದ ಅಂಗವಾಗಿ ಕರ್ನಾಟಕದಾದ್ಯಂತ ಜನರಲ್ಲಿ ಆಧ್ಯಾತ್ಮಿಕತೆಯ ಬಗ್ಗೆ ಒಲವನ್ನು ಮೂಡಿಸುವ ಸಲುವಾಗಿ ವರ್ಷಪೂರ್ತಿ ಜಾಗೃತಿಗಾಗಿ ಜಾದೂ ಎಂಬ ಹೆಸರಿನ ಆಧ್ಯಾತ್ಮಿಕ ಜಾದೂ ಪ್ರದರ್ಶನ

**ಅಪಾಯಕಾರೀ ಚಮತ್ಕಾರಗಳು**

- ಬಟ್ಟ ಬಯಲಿನಲ್ಲಿ ಆನೆ ಅಂತರ್ಧಾನ
- ನೀರು ತುಂಬಿದ ಗಾಜಿನ ಪೆಟ್ಟಿಗೆಯಲ್ಲಿ ಬಂಧನ- ಬಿಡುಗಡೆ
- ಕತ್ತಿಯ ಅಲುಗಿನ ಚಮತ್ಕಾರ
- ಕೋವಿಯಿಂದ ಹೊಡೆದ ಗುಂಡನ್ನು ಕೈಯಿಂದ ಹಿಡಿಯುವುದು

**ಭಾಗವಹಿಸಿದ ಅಂತಾರಾಷ್ಟ್ರೀಯ ಜಾದೂ ಸಮ್ಮೇಳನಗಳು:**

- **1982ರಲ್ಲಿ ಹ್ಯೂಸ್ಟನ್‌ನಲ್ಲಿ ಜರಗಿದ ಅಮೇರಿಕಾ ಜಾದೂಗಾರರ ಸಮ್ಮೇಳನ.**
- **1991ರಲ್ಲಿ ಸ್ವಿಜರ್‌ಲ್ಯಾಂಡ್‌ನಲ್ಲಿ ಜರಗಿದ 18ನೇ ಅಂತಾರಾಷ್ಟ್ರೀಯ ಜಾದೂ ಫೆಡರೇಶನ್ ಸಮ್ಮೇಳನ**
- **1996ರಲ್ಲಿ ಹಾಲೇಂಡ್‌ನ ಲೀವಾರ್ಡನ್‌ಲ್ಲಿ ಜರಗಿದ ಡಚ್ ಜಾದೂ ಸಮ್ಮೇಳನದಲ್ಲಿ** 'ಭಾರತದ ಜಾದೂ' ಬಗ್ಗೆ ಉಪನ್ಯಾಸ ಹಾಗೂ ಕಾರ್ಯಕ್ರಮವನ್ನು ನೀಡಿದ ಪ್ರಥಮ ಭಾರತೀಯ.
- **1998 ಅಮೇರಿಕಾದ ಲಾಸ್ ಏಂಜಲೀಸ್‌ನಲ್ಲಿ ನಡೆದ 70ನೇ ಅಂತಾರಾಷ್ಟ್ರೀಯ ಜಾದೂ ಸಮ್ಮೇಳನದ** ಯುವ ಜಾದೂ ಪ್ರದರ್ಶನದಲ್ಲಿ ಕಾರ್ಯಕ್ರಮ ನೀಡಿದ ಏಕೈಕ ಭಾರತೀಯ.
- 1999ರಲ್ಲಿ ಅಮೇರಿಕಾದ ಲಿಟ್ಲ್ ರಾಕ್ ಸಿಟಿಯಲ್ಲಿ ನಡೆದ 71ನೇ ವಿಶ್ವ ಜಾದೂಗಾರರ ಸಮ್ಮೇಳನದಲ್ಲಿ ವಿಶೇಷ ಕಾರ್ಯಕ್ರಮಕ್ಕೆ ಆಹ್ವಾನಿತರಾದ ಪ್ರಪ್ರಥಮ ಭಾರತೀಯ ಜಾದೂಗಾರರೆಂಬ ಹೆಗ್ಗಳಿಕೆ.
- **2003 ಹಾಲೇಂಡ್‌ನಲ್ಲಿ ಜರಗಿದ ಅಂತಾರಾಷ್ಟ್ರೀಯ ಜಾದೂ ಫೆಡರೇಶನ್** ಸಮ್ಮೇಳನ

1982ರಿಂದ 1987ರವರೆಗೆ ಭಾರತದಲ್ಲಿ ಜರಗಿದ ಎಲ್ಲ ಜಾದೂಸ್ಪರ್ಧೆಗಳಲ್ಲೂ ಪ್ರಥಮ ಸ್ಥಾನವನ್ನು ಗಳಿಸಿದ ಭಾರತದ ಏಕೈಕ ಜಾದೂಗಾರ.

ಮದರಾಸು ತೆಲುಗು ಅಕಾಡಮಿಯವರು ನೀಡುವ 1992ರ ಯುಗಾದಿ ಪುರಸ್ಕಾರವನ್ನು ಗಳಿಸಿದ ಕರ್ನಾಟಕದ ಪ್ರಥಮ ಜಾದೂಗಾರ.

**1991ರಲ್ಲಿ ಸ್ವಿಜರ್‌ಲ್ಯಾಂಡ್‌ನಲ್ಲಿ ಜರಗಿದ 18ನೇ ಅಂತಾರಾಷ್ಟ್ರೀಯ ಜಾದೂ ಫೆಡರೇಶನ್** ಸಮ್ಮೇಳನದ ಸ್ಪರ್ಧೆಯಲ್ಲಿ ಹಿರಿಯರೊಂದಿಗೆ ಸ್ಪರ್ಧಿಸಿ ಜ್ಯೂರಿಗಳ ವಿಶೇಷ ಪ್ರಶಸ್ತಿ ಗಳಿಸಿದ ಭಾರತೀಯ. **ಇದು ಭಾರತಕ್ಕೆ ಸಂದ ಪ್ರಪ್ರಥಮ ಹಾಗೂ ಏಕೈಕ ಅಂತಾರಾಷ್ಟ್ರೀಯ ಜಾದೂ ಪ್ರಶಸ್ತಿ**

2001 ಫೆಬ್ರವರಿ 12ರಂದು ಲಂಡನಿನ ಬಿ.ಬಿ.ಸಿ ಟೆಲಿವಿಶನ್, Hans Klok Production Germany, Thames Television London, NHK TV Japan, Edenac Productions France, Sri Lankan TV, MBC ಸಂಸ್ಥೆಗಳಿಗಾಗಿ ಪ್ರದರ್ಶನ
ಬಹ್ರೈನ್ ಅಮೆರಿಕ, ಇಂಗ್ಲೆಂಡ್, ಅಯರ್ಲೇಂಡ್ ಗಳಲ್ಲಿ ರೇಡಿಯೋ ಸಂದರ್ಶನಗಳು

ಛೂ ಮಂತರ್, ಗಿಲಿ ಗಿಲಿ ಮ್ಯಾಜಿಕ್ ಹೆಸರಿನಲ್ಲಿ ಸರಣಿ ಕಾರ್ಯಕ್ರಮಗಳ ಪ್ರದರ್ಶನ ಭಾರತದ ಹೆಚ್ಚಿನ ಟಿ.ವಿ ಮುಖ್ಯವಾಹಿನಿಗಳಲ್ಲಿ ಸಂದರ್ಶನ.

ಗಿಲಿ ಗಿಲಿ 94, ಗಿಲಿ ಗಿಲಿ 97, ಗಿಲಿ ಗಿಲಿ 2001 ಅಂತಾರಾಷ್ಟ್ರೀಯ ಜಾದೂಗಾರರ ಸಮ್ಮೇಳನಗಳನ್ನು ಉಡುಪಿಯಲ್ಲಿ ಆಯೋಜಿಸಿ ದೇಶವಿದೇಶಗಳ ಯಕ್ಷಿಣಿಗಾರರ ಕಾರ್ಯಕ್ರಮಗಳನ್ನು ಜನರು ವೀಕ್ಷಿಸಲು ಅನುವು ಮಾಡಿಕೊಡುವುದರೊಂದಿಗೆ ಭಾರತದ ಜಾದೂ ಬಗ್ಗೆ ವಿದೇಶದ ಜನರೂ ಒಲವು ತೋರುವಂತೆ ಮಾಡುವಲ್ಲಿ ಸಫಲರಾಗಿದ್ದಾರೆ.

ಲಂಡನಿನ ಬಿ.ಬಿ.ಸಿ ಸಂಸ್ಥೆಯವರು ಉಡುಪಿಗೆ ಬಂದು ಶಂಕರ್ ಕುಟುಂಬದ ಸಂದರ್ಶನ ಜಾದೂ ಕಾರ್ಯಕ್ರಮದ ಚಿತ್ರೀಕರಣ.

ಮಂಗಳೂರಿನ ಚಿರಂತನ ವೃದ್ಧಾಶ್ರಮದ ಟ್ರಸ್ಟಿಯಾಗಿದ್ದು ಸಂಸ್ಥೆಯ ಸಹಾಯಾರ್ಥ ಅನೇಕ ಸಾರ್ವಜನಿಕ ಪ್ರದರ್ಶನಗಳನ್ನು ನೀಡಿ ನೆರವಾಗಿದ್ದಾರೆ.

2004ರಲ್ಲಿ ಪ್ರಸಿದ್ಧ ಮಕ್ಕಳ ನಾಟಕ ನಿರ್ದೇಶಕ ಮೂರ್ತಿ ದೇರಾಜೆಯವರ ಪುತ್ರಿ ಮೈಥಿಲಿಯನ್ನು ವಿವಾಹವಾಗಿ ವರ್ಚಸ್ವಿ ಎಂಬ ಮಗನನ್ನು ಪಡೆದಿದ್ದಾರೆ. ಮೈಥಿಲಿಯೂ ಜಾದೂ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದು ಸಹಕರಿಸುತ್ತಿದ್ದಾಳೆ.